ಓ.ಎಸ್. ನಂಃ 143/2017
ಪಿ.ಡಬ್ಲ್ಯುಃ 01

ದಿನಾಂಕಃ 08-02-2018 ರಂದು ಮುಖ್ಯವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ಪ್ರಮಾಣ ಪತ್ರದಲ್ಲಿನ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿದ್ದೇನೆ.

ನನ್ನ ಪ್ರಮಾಣ ಪತ್ರದೊಂದಿಗೆ ಲಗತ್ತಿಸಿರುವ ದಾಖಲಾತಿಗಳ ವಿವರ ಈ ಕೆಳಗಿನಂತಿದೆ.

1. ದಿನಾಂಕಃ 06-10-1971 ರ ನೋಂದಾಯಿತ ಖಂಡಿತ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 01 ಎಂದು ಗುರ್ತಿಸಲಾಯಿತು. ನಿಪಿಃ 01 ರಲ್ಲಿರುವ ಬಿಕ್ಕಲಂದಾರರ ಸಹಿಯನ್ನು ನಿಪಿಃ 01(ಎ) ಎಂದು ಗುರ್ತಿಸಲಾಯಿತು. ನಿಪಿಃ 01 ಕ್ಕೆ ಸಾಕ್ಷಿದಾರರ ಸಹಿಗಳನ್ನು ನಿಪಿಃ 1(ಬಿ) ಮತ್ತು ನಿಪಿಃ 01(ಸಿ) ಎಂದು ಗುರ್ತಿಸಲಾಯಿತು.

2. ರಸೀದಿ ಪಟ್ಟಾ ಪುಸ್ತಕವನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 02 ಎಂದು ಗುರ್ತಿಸಲಾಯಿತು.

3. ಒಟ್ಟು 13 ಕಂದಾಯ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 03 ರಿಂದ ನಿಪಿಃ 15 ಎಂದು ಗುರ್ತಿಸಲಾಯಿತು.

4. ಮ್ಯುಟೇಶನ್ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್‌ನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 16 ಎಂದು ಗುರ್ತಿಸಲಾಯಿತು.

5. ಸರ್ವೆ ನಂ. 136/ಬಿ ಉಳ್ಳ ಜಮೀನಿನ ಒಟ್ಟು 22 ಪಹಣಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 17 ರಿಂದ 38 ಎಂದು ಗುರ್ತಿಸಲಾಯಿತು.

6. ಎರಡು ಮ್ಯುಟೇಶನ್ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್‌ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 39 ಮತ್ತು ನಿಪಿಃ 40 ಎಂದು ಗುರ್ತಿಸಲಾಯಿತು.

7. ಮಾನ್ಯ ತಹಶೀಲ್ದಾರ್ ಕಾರ್ಯಾಲಯ, ಕೂಡ್ಲಿಗಿಯವರು ನೀಡಿದ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 41 ಎಂದು ಗುರ್ತಿಸಲಾಯಿತು.

8. ವಾದಿಯು ಕೂಡ್ಲಿಗಿ ಪೊಲೀಸ್ ಠಾಣೆಗೆ ನೀಡಿದ ದೂರು ಮತ್ತು ಹಿಂಬರಹವನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿಃ 42 ಮತ್ತು ನಿಪಿಃ 43 ಎಂದು ಗುರ್ತಿಸಲಾಯಿತು.

9. ಪರ್ಯಾವೆಕ್ಷಕರು, ಭೂ-ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಕೂಡ್ಲಿಗಿಯವರು ನೀಡಿದ ಸರ್ವೆ ಸ್ಕೆಚ್‌ನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 44 ಎಂದು ಗುರ್ತಿಸಲಾಯಿತು.

ಆದ್ದರಿಂದ ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಈ ಮೂಲಕ ಮಾನ್ಯ ನ್ಯಾಯಾಲಯವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಪ್ರತಿವಾದಿಯು ಯಾವುದೇ ತಕರಾರನ್ನು ಸಲ್ಲಿಸದ ಕಾರಣ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.